ಸಾಕ್ಷಿಯನ್ನು ದಿಃ **11.09.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 2, 3 ಮತ್ತು 6 ನೇ ಎದುರುದಾರರ ಪರ ಶ್ರೀ ಬಿ.ಎ.ಎಸ್ ವಕೀಲ**ರಿಂದ**

ಈ ಅರ್ಜಿಯನ್ನು ನನ್ನ ತಂದೆ ಚಂದ್ರೇಗೌಡರವರು ಹಾಕಿದ್ದಾರೆ. ಎದುರುದಾರರಾಗಿ ಪುಟ್ಟಮ್ಮ, ಜಯಮ್ಮ ಮತತು ಹರೀಶ್ ರವರಿದ್ದಾರೆ. ಇವರನ್ನು ಬಿಟ್ಟು ಪಕ್ಷಗಾರರಾಗಿ ಮತ್ತಿನ್ಯಾರು ಇದ್ದಾರೆ ಎಂದರೆ ಮಲ್ಲೇಶ್ ಮತ್ತು ಚೇತನ್ ರವರಿದ್ದಾರೆ ಎನ್ನುತ್ತಾರೆ. ಭಾಗಾಂಶವಾಗಿ ಮೂಲತಃ ದಾವೆಯನ್ನು ನನ್ನ ತಂದೆ, ಮತ್ತು ಚಿಕ್ಕಪ್ಪಂದಿರಾದ ಮಲ್ಲೇಶ್ ಮತ್ತು ಶ್ರೀನಿವಾಸ್ ರವರು ಹೂಡಿದ್ದರು. ಅಸಲು ದಾವಾದಲ್ಲಿ ನನ್ನ ತಂದೆಗೆ 1/6 ಭಾಗ ಹಿಸ್ಸೆಗೆ ಆದೇಶವಾಗಿದೆ. ಆದರೆ ನನ್ನ ತಂದೆ ಈ ಅರ್ಜಿಯನ್ನು 1/5 ಹಿಸ್ಸೆ ಕೋರಿ ಹಾಕಿದ್ದಾರೆ ಎಂದು ನುಡಿದು ನನ್ನ ಅಜ್ಜಿ ತೀರಿ ಹೋದ ಕಾರಣ 1/6 ರಿಂದದ 1/5 ಕೋರಿದ್ದಾರೆ ಎನ್ನುತ್ತಾರೆ. ಪ್ರಸ್ತುತ ಅರ್ಜಿಯನ್ನು ನನ್ನ ತಂದೆ 2015 ನೇ ಇಸವಿಯಲ್ಲಿ ಹಾಕಿದ್ದು,ಯಾವ ದಿನ ಮತ್ತು ತಿಂಗಳು ಎಂದು ನನಗೆ ಹೇಳಲು ನೆನಪಿಲ್ಲ. 2015 ರಲ್ಲೆ 1/5 ನೇ ಭಾಗ ಹಿಸ್ಸೆ ಬರಬೇಕು ಎಂದು ಹಾಕಿದ್ದರು. ನನ್ನ ಅಜ್ಜಿ 2017 ರಲ್ಲಿ ತೀರಿ ಹೋಗಿದ್ದಾರೆ. ಆದರೆ ಅವರು ಯಾವ ದಿನ, ತಿಂಗಳಲ್ಲಿ ತೀರಿ ಹೋಗಿದ್ದಾರೆ ಎಂದು ಈಗ ನನಗೆ ನೆನಪಿಲ್ಲ. ನನ್ನ ತಂದೆ ಮೈಸೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ತಂದೆ ಮೈಸೂರಿನಲ್ಲಿ ಸುಮಾರು 30 ವರ್ಷಗಳಿಂದ ವಾಸವಾಗಿದ್ದಾರೆ. ನಮ್ಮ ಅಜ್ಜಿ ತಾತ ಎಲ್ಲರೂ 3 ನೇ ಎದುರುದಾರರಾದ ಜಯಮ್ಮನವರ ಜೊತೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಜಯಮ್ಮ ಎಂದರೆ ನನ್ನ ಸೋದರತ್ತೆ ನನ್ನ ತಂದೆಯ ತಂಗಿ ಎಂದರೆ ಸರಿ. ನನ್ನ ಅಜ್ಜಿ ತಾತ ಕಾಲವಾಗುವವರೆಗೂ ನನ್ನ ಅತ್ತೆ ಜಯಮ್ಮ ನವರೆ ಅವರ ಪಾಲನೆ ಪೋಷಣೆ ಮಾಡುತಿದ್ದರು ಎಂದರೆ ಸರಿ ನಾವು ಹೋಗಿ ಬಂದು ಮಾಡುತ್ತಿದ್ದೆವು.

ಈ ಅರ್ಜಿಯಲ್ಲಿ ತನ್ನನ್ನು ಪಕ್ಷಗಾರರಾನ್ನಾಗಿ ಸೇರ್ಪಡೆ ಮಾಡಬೇಕು ಎಂದು ಅರ್ಜಿ ಸಲ್ಲಿಸಿರುವ ಹರೀಶ್ ರವರು ನನ್ನ ಸೋರದತ್ತೆಯಾದ ಜಯಮ್ಮನವರ ಮಗ ಎಂದರೆ ಸರಿ. ನನ್ನ ಅಜ್ಜಿ ಅವರ ಭಾಗಕ್ಕೆ ಬಂದಿರುವಂತಹ ಸ್ವತ್ತುಗಳನ್ನು ಸದರಿ ಹರೀಶ್ ರವರಿಗೆ ಮರಣ ಶಾಸನ ಮೂಲಕ ಬರೆದುಕೊಟ್ಟಿದ್ದಾರೆ

ಎಂದರೆ ಸರಿಯಲ್ಲ, ನಮ್ಮ ಅಜ್ಜಿಗೆ ಅವೆಲ್ಲಾ ತಿಳಿಯುತ್ತಿರಲಿಲ್ಲ. 2 ನೇ ಎದುರುದಾರರು ನನಗೆ ಚಿಕ್ಕಪ್ಪ ನಾಗಬೇಕು. ಅವರು ಅಂಗವಿಕಲರು ಎಂದರೆ ಸರಿ. ಅವರನ್ನು ಸಹ ನನ್ನ ಅತ್ತೆ ಜಯಮ್ಮ ಮತ್ತು ಹರೀಶ್ ನವರೆ ಈವರೆಗೂ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನ್ನ ಅಜ್ಜಿ ಮತ್ತು ನನ್ನ ಚಿಕ್ಕಪ್ಪ ಪರಮೇಶ್ ಗೌಡ ರವರು ಸದರಿ ಹರೀಶ್ ರವರಿಗೆ ತಮ್ಮ ಪಾಲಿನ ಸ್ವತ್ತುಗಳನ್ನು ವಿಲ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅವರಿಬ್ಬರಿಗೂ ಅಷ್ಟು ತಿಳುವಳಿಕೆ ಇಲ್ಲ ಪರಮೇಶ್ ಗೌಡ ರವರಿಗೆ ಮಾತು ಬರುವುದಿಲ್ಲ ಅವರಿಗೂ ತಿಳುವಳಿಕೆ ಇಲ್ಲ ಎನ್ನುತ್ತಾರೆ. ವಿಲ್ ಬರೆದಿರುವ ವಿಚಾರ ನನ್ನ ತಂದಗೆ ಗೊತ್ತಿತ್ತು ಎಂದರೆ ಸರಿ, ಈ ಅರ್ಜಿಯನ್ನು 1/5 ಭಾಗಕ್ಕೆ ಹಾಕಿದ ನಂತರ ಗೊತ್ತಾಯಿತು. ಸದರಿ ವಿಲ್ ಸರಿ ಇಲ್ಲ ಅದನ್ನು ರದ್ದು ಪಡಿಸಬೇಕು ಎಂದು ನನ್ನ ತಂದೆಯಾಗಲಿ ಅಥವಾ ನಾನಗಲಿ ಯಾವುದೆ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ವಿಲ್ ಪತ್ರವನ್ನು ನಾನು ನೋಡಿಲ್ಲ. ಸದರಿ ವಿಲ್ ಯಾವ ದಿನಾಂಕದಂದು ಆಗಿದೆ ಮತ್ತು ಅದಕ್ಕೆ ಯಾರ್ಯಾರು ಸಾಕ್ಷಿದಾರಾಗಿದ್ದಾರೆ ಎಂಬುದನ್ನು ಕೂಡ ನಾನು ತಿಳಿದುಕೊಂಡಿಲ್ಲ. ನಮ್ಮ ತಂದೆಗೆ ಆಗಿರುವ 1/6 ಭಾಗಾಂಶವನ್ನು ಕೊಡಲು ಆದೇಶ ಆಗಿತ್ತು. ಅದರೆ ಈಗ 1/5 ಭಾಗ ಬರಬೇಕು ಎಂದು ಕೇಳುತ್ತಿದ್ದೇವೆ.

2015 ರಲ್ಲಿ ನಮ್ಮ ಅಜ್ಜಿ ಪುಟ್ಟಮ್ಮ ಮತ್ತು ನನ್ನ ಚಿಕ್ಕಪ್ಪ ಪರಮೇಶ್ ಗೌಡ ರವರು ಹರೀಶ್ ರವರು ತಮ್ಮ ಪಾಲನೆ ಪೋಷಣೆ ಮಾಡುತ್ತಿರುವುದರಿಂದ ಅವರಿಗೆ ವಿಲ್ ಬರೆದಿದ್ದಾರೆ ಎಂದರೆ ಸರಿಯಲ್ಲ. ಅವರು ಬರೆದಿಲ್ಲ. ವಿಲ್ ನಲ್ಲಿ ಯಾವ ಯಾವ ಆಸ್ತಿಗಳನ್ನು ಬರೆಸಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ದಾವಾ ಆಸ್ತಿಗಳನ್ನು ನಾನು, ನನ್ನ ಚಿಕ್ಕಪ್ಪಂದಿರಾದ ಮಲ್ಲೇಶ್ ಮತ್ತು ಶ್ರೀನೀವಾಸ್ ರವರು ಅನುಭವಿಸುತ್ತಿದ್ದೇವೆ. ನಾವು 3 ಜನರು ದಾವಾ ಆಸ್ತಿಯ ಸ್ವಾಧೀನದಲ್ಲೆ ಇದ್ದುಕೊಂಡು ಭಾಗ ಕೊಡಿ ಎಂದು ನಾವೆ ಈ ಅರ್ಜಿಯನ್ನು ಹೂಡಿದ್ದೇವಾ ಎಂದರೆ ನಮ್ಮ ತಂದೆ ಮೈಸೂರಿನಲ್ಲಿ ಇರುವುದರಿಂದ ನಾವ್ಯಾರು ದಾವಾ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳ ಪೈಕಿ ಮುಕ್ಕಾಲು ಭಾಗದಲ್ಲಿ 5 ನೇ ಎದುರುದಾರರಾದ ಮಲ್ಲೇಶ್ ರವರೆ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ನಾವು ಮತ್ತು ನಮ್ಮ ಚಿಕ್ಕಪ್ಪ ಮಲ್ಲೇಶ್ ರವರು ವಿಶ್ವಾಸದಿಂದ ಇರುವುದಿಲ್ಲ. ಅರ್ಜಿದಾರರಾದ ನನ್ನ

ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ವಾಸ್ತವಾಂಶ ತಿಳಿದು ಬರುತ್ತದೆ ಎಂದೆ ನನ್ನನ್ನು ಇಲ್ಲಿಕರೆಸಿ ವಿಚಾರಣೆ ಸಾಕ್ಷಿ ನುಡಿಸುತ್ತಿರುವುದು 5 ನೇ ಎದುರುದಾರರಾದ ಮಲ್ಲೇಶ್ ರವರು ಎಂದರೆ ಸುಳ್ಳು. ಈ ದಿನ ಕೂಡ 5 ನೇ ಎದುರುದಾರರಾದ ಮಲ್ಲೇಶ್ ರವರು ನನ್ನನ್ನು ನ್ಯಾಯಾಲಯಕ್ಕೇ ಕರೆ ತಂದಿರುವುದು ಎಂದರೆ ಸರಿಯಲ್ಲ. ಇಂದು 5 ನೇ ಎದುರುದಾರರಾದ ಮಲ್ಲೇಶ್ ರವರು ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ.

ಈ ಅರ್ಜಿಯಲ್ಲಿ 2 ಮತ್ತು 3 ನೇ ಎದುರುದಾರರು ಏನು ತಕರಾರು ಬರೆಸಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೆ ರೀತಿ 5 ನೇ ಎದುರುದಾರರಾದ ಮಲ್ಲೇಶ್ ರವರು ಏನು ತಕರಾರು ಬರೆಸಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಿಲ್ ಬರೆದಿರುವ ವಿಚಾರ ಅರ್ಜಿದಾರರಾದ ನನ್ನ ತಂದೆಗೆ ಮತ್ತು 4 ಮತ್ತು 5 ನೇ ಎದುರುದಾರರಿಗೆ ಮುಂಚೆಯೆ ತಿಳಿದಿತ್ತು ಎಂದರೆ ಸರಿಯಲ್ಲ. ಪುಟ್ಟಮ್ಮ ಮತ್ತು ಪರಮೇಶ್ ಗೌಡ ರವರಿಗೆ ಅವರ ಭಾಗದ ಆಸ್ತಿಯನ್ನು ವಿಲ್ ಮಾಡುವ ಹಕ್ಕು ಇತ್ತು ಎಂದರೆ ಸರಿ. ಹರೀಶ್ ರವರು ಪಕ್ಷಗಾರರಾಗಿ ಸೇರ್ಪಡೆಗೊಳ್ಳಲು ಸಲ್ಲಿಸಿರುವ ಅರ್ಜಿಗೆ ನನ್ನ ತಂದೆ ಏನು ತಕರಾರು ಹಾಕಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ನಾನು ನನ್ನ ಮುಖ್ಯ ವಿಚಾರಣೆ ಸಲುವಾಗಿ ನನ್ನ 2 ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದೇನೆ. 1 ನೇ ಪ್ರಮಾಣ ಪತ್ರದಲ್ಲಿ 1/6 ಭಾಗ ಹಿಸ್ಸೆ ಬರಬೇಕು ಎಂದು ತಿಳಿಸಿದ್ದೇವು. 2 ನೇ ಪ್ರಮಾಣ ಪತ್ರದಲ್ಲಿ 1/5 ಭಾಗ ಬರಬೇಕು ಎಂದು ತಿಳಿಸಿದ್ದೇನೆ. ನನ್ನ ಪ್ರಮಾಣ ಪತ್ರವನ್ನು ನಾನೆ ಹೇಳಿ ಬರೆಯಿಸಿ ಹಾಕಿದ್ದೇನೆ.

**ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.